ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 1996-97ನೇ ಸಾಲಿನಲ್ಲಿ ನಬಾರ್ಡ್‌ನಿಂದ ರಾಜ್ಯದಲ್ಲಿ 245 ಕಾಮಗಾರಿಗಳು ಒಪ್ಪಿತವಾಗಿದೆ. ಈ ಸಾಲಿನಲ್ಲಿ ಇದುವರೆಗೆ 11 ಸೇತುವೆ ಕಾಮಗಾರಿಗಳು ಮಾತ್ರ ಒಪ್ಪಿತವಾಗಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1 ರಸ್ತೆ ಮತ್ತು 10 ಸೇತುವೆ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿಲಾಗಿದೆ.

ರಸ್ತೆ	1
ಸೇತುವೆ	10

ಇ) ಮೇಲಿನ 11 ಕಾಮಗಾರಿಗಳಿಗೆ 506.70 ಲಕ್ಷ ರೂ. ನಿಗದಿಪಡಿಸಲಾಗಿದೆ.

ದ. ಕನ್ನಡ ಜಿಲ್ಲೆಯ ರಸ್ತೆಗಳ ದುರಸ್ತಿ

1698 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳು ಹಾಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಅದನ್ನು ಸರಿಪಡಿಸಲು ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ. ರಸ್ತೆ ಸರಿಪಡಿಸಲು, ಮಳೆಹಾನಿ ದುರಸ್ತಿ ಅನುದಾನದಲ್ಲಿ264.55 ಲಕ್ಷ ರೂ. ಬಿಡುಗಡೆ ಮಾಡಿದೆ. ಇದಲ್ಲದೆ ವಾರ್ಷಿಕ ದುರಸ್ತಿ : ನಿರ್ವಹಣೆಗೆ ಒಟ್ಟು361.20 ಲಕ್ಷ ರೂ. ಬಿಡುಗಡೆ ಮಾಡಿದೆ.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕ್ರಿಕೆಟ್ ಕ್ರೀಡಾಂಗಣ

1699 - ಶ್ರೀ ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕ್ರಿಕೆಟ್ ಕ್ರೀಡಾಂಗಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಹಾಗೂ ಇದಕ್ಕೆ ತಗಲುವ ವೆಚ್ಚವೆಷ್ಟು? ಹಾಗೂ ಸರ್ಕಾರವು ಕೊಡುವ ಅನುದಾನವೆಷ್ಟು?*

2. *ಮಂಗಳೂರಿನ ಮಂಗಳ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಅಥವಾ ಸಿಂಡರ್ ಟ್ರಾಕ್ ಎಷ್ಟು ಸಮಯದ ಒಳಗೆ ಹಾಕಲಾಗುವುದು? ಹಾಗೂ ಮಂಗಳೂರು ಕ್ರೀಡಾಂಗಣದ ಸರ್ವತೋಮುಖ ಅಭಿವೃದ್ಧಿ ಮಾಡಲು ತಗಲುವ ವೆಚ್ಚ ಎಷ್ಟು? ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?*

3. *ಒಳಾಂಗಣ ಕ್ರೀಡಾಂಗಣ ಕಟ್ಟುವ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು? ಇದಕ್ಕೆ ತಗಲುವ ಖರ್ಚುಎಷ್ಟು?*

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

1) ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸುವ ಉದ್ದೇಶವನ್ನು ಸರ್ಕಾರ ಹೊಂದಿರುವುದಿಲ್ಲ. ಆದುದರಿಂದ ಅಂದಾಜು ವೆಚ್ಚದ ವಿವರಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

2) 1998-99ನೇ ಸಾಲಿನಲ್ಲಿ ಸಿಂಡರ್ ಟ್ರಾಕ್ ಅಳವಡಿಸಲು ಉದ್ದೇಶ ಹೊಂದಲಾಗಿದೆ. ಸಿಂಥಟಿಕ್ ಟ್ರಾಕ್ ಹಾಕುವ ಯೋಜನೆ ಸಧ್ಯಕ್ಕೆ ಇರುವುದಿಲ್ಲ. ಆದಾಗ್ಯೂ ಅಂದಾಜು ವೆಚ್ಚವಾದ ರೂ. 30.00 ಲಕ್ಷ ಸಿಂಡರ್ ಟ್ರಾಕ್‌ನ್ನು ಮಂಗಳ ಸ್ಟೆಡಿಯಂನಲ್ಲಿ ಹಾಕಲು ಉದ್ದೇಶಿಸಲಾಗಿದೆ. ಮಂಗಳಾ ಕ್ರೀಡಾಂಗಣದ ಸರ್ವತೋಮುಖ ಅಭಿವೃದ್ಧಿ ಮಾಡಲು ಅಂದಾಜು ರೂ. 1,55,000-00 ವೆಚ್ಚ ತಗಲಬಹುದು.

3) ಮಂಗಳೂರು ನಗರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲು ರೂ. 55.00 ಲಕ್ಷ ಅಂದಾಜು ವೆಚ್ಚದಲ್ಲಿ ಸರ್ಕಾರವು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ರಾಜ್ಯದ ಲೋಕೋಪಯೋಗಿ ಇಲಾಖೆಯ ರಸ್ತೆಗಳು

1700 - ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96, 1996-97ನೇ ಸಾಲಿಗೆ ಸರ್ಕಾರವು ಲೋಕೋಪಯೋಗಿ ಇಲಾಖಾ ರಸ್ತೆಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದೆ?*

ಆ) *1997-98ನೇ ಸಾಲಿಗೆ ಎಷ್ಟು ಹಣ ಒದಗಿಸಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರತಿ ಕ್ಷೇತ್ರಕ್ಕೆ 95-96ನೇ ಸಾಲಿನಲ್ಲಿ 10 ಲಕ್ಷ ರೂ. ಹಾಗೂ 96-97ನೇ ಸಾಲಿನಲ್ಲಿ 9.50 ಲಕ್ಷ ರೂ. ಒಟ್ಟು ಬಿಡುಗಡೆ ಆದ ಮೊತ್ತ ಕೆಳಗಿನಂತಿದೆ.

ವರ್ಷ	ಅನುದಾನ (ಲಕ್ಷ ರೂ.ಗಳಲ್ಲಿ)
1995-96	2120.00
1996-97	2040.00

ಆ) 2000 ಲಕ್ಷ ರೂ.

ಅಧ್ಯಕ್ಷರು : ಪಟ್ಟಿಯನ್ನು ಮಂಡಿಸಲಾಯಿತು.